ಕರ್ನಾಟಕ ಸರ್ಕಾರ

**ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ**

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 : ಜೂನ್ 16, 2020**

# ಪತ್ರಿಕಾ ಪ್ರಕಟಣೆ

## ಎಸಿಬಿ ದಾಳಿ

**ಬೆಂಗಳೂರು, ಜೂನ್ 16 (ಕರ್ನಾಟಕ ವಾರ್ತೆ)**

ರಾಜ್ಯದ 3 ವಿವಿಧ ಸರ್ಕಾರಿ ನೌಕರರು ತಮ್ಮ ಬಲ್ಲ ಮೂಲಗಳಿಗಿಂತ ಹೆಚ್ಚು ಅಸಮತೋಲನ ಆಸ್ತಿ-ಪಾಸ್ತಿಗಳನ್ನು ಹೊಂದಿರುವ ಬಗ್ಗೆ ವಿಶ್ವಾಸಾರ್ಹ ಮಾಹಿತಿ ಸಂಗ್ರಹಿಸಿ ಅಕ್ರಮ ಆಸ್ತಿ ಗಳಿಕೆ ಪ್ರಕರಣಗಳನ್ನು ದಾಖಲಿಸಿ ಅವರಿಗೆ ಸಂಬಂಧಿಸಿದ 12 ಸ್ಥಳಗಳ ಮೇಲೆ ಇಂದು ದಾಳಿ ನಡೆಸಿದೆ, ಶೋಧನಾ ಕಾರ್ಯವು ಮುಂದುವರೆದಿದ್ದು ಈವರೆಗೆ ಶೋಧನೆ ನಡೆಸಲಾದ ಸ್ಥಳಗಳ ಹಾಗೂ ಸರ್ಕಾರಿ ಅಧಿಕಾರಿಗಳ ಮಾಹಿತಿ ಈ ಕೆಳಕಂಡಂತಿರುತ್ತವೆ.

1. ಸುಭಾಷ ಸುರೇಂದ್ರ ಉಪ್ಪಾರ, ಸಹಾಯಕ ನಿಯಂತ್ರಕರು, ತನಿಖಾ ದಳ–3, ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಛೇರಿ, ಬೆಳಗಾವಿ.
   ಇವರ ಬೆಳಗಾವಿ ಜಿಲ್ಲೆ, ರುಕ್ಮಿಣಿನಗರದಲ್ಲಿರುವ ವಾಸದ ಮನೆ, ಬೆಳಗಾವಿ ಜಿಲ್ಲೆ ಬಸವನ ಕುಡಚಿಯಲ್ಲಿರುವ ಸಹೋದರನ ವಾಸದ ಮನೆ ಹಾಗೂ ಬೆಳಗಾವಿ ಜಿಲ್ಲೆ ಬಸವನ ಕುಡಚಿಯಲ್ಲಿರುವ ಅಳಿಯನ ವಾಸದ ಮನೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ತನಿಖಾ ದಳ–3, ಕಾನೂನು ಮಾಪನ ಶಾಸ್ತ್ರ ಸಹಾಯಕ ನಿಯಂತ್ರಕರ ಕಛೇರಿ, ಮಾಪನ ಭವನ, ಬೆಳಗಾವಿ.

2. ಗೋಪಾಲ ಎಲ್. ಮಾಲಗತ್ತಿ, ಭೂ ದಾಖಲೆಗಳ ಉಪ ನಿರ್ದೇಶಕರು (ಡಿ.ಡಿ.ಎಲ್.ಆರ್), ಬಾಗಲಕೋಟೆ, (ಪ್ರಭಾರ ಭೂ ದಾಖಲೆಗಳ ಉಪ ನಿರ್ದೇಶಕರು, ವಿಜಯಪುರ).
   ಇವರ ಕೊಪ್ಪಳ ಜಿಲ್ಲೆ ಜೆ.ಹೆಚ್. ಪಟೇಲ್ ನಗರದಲ್ಲಿರುವ ವಾಸದ ಮನೆ ಹಾಗೂ ಇವರು ವಾಸವಿರುವ ಬಾಗಲಕೋಟೆ ಜಿಲ್ಲೆ ಸರ್ಕಾರಿ ವಸತಿ ಗೃಹ, ಇವರು ಕರ್ತವ್ಯ ನಿರ್ವಹಿಸುತ್ತಿರುವ ಬಾಗಲಕೋಟೆಯ ಭೂ ದಾಖಲೆಗಳ ಉಪ ನಿರ್ದೇಶಕರ ಕಛೇರಿ, ಬಾಗಲಕೋಟೆ ಹಾಗೂ ಇವರು ಪ್ರಭಾರವಾಗಿ ಕರ್ತವ್ಯ ನಿರ್ವಹಿಸುತ್ತಿರುವ ವಿಜಯಪುರ ಭೂ ದಾಖಲೆಗಳ ಉಪ ನಿರ್ದೇಶಕರ ಕಛೇರಿ, ವಿಜಯಪುರ.

3. ಜಗದೇವಪ್ಪ, ಅಭಿವೃದ್ಧಿ ಅಧಿಕಾರಿ, ದೇವರಾಜ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಯಾದಗಿರಿ ಜಿಲ್ಲೆ ಮತ್ತು ಕಲಬುರಗಿ ಜಿಲ್ಲೆ.
   ಇವರ ಕಲಬುರಗಿ ಜಿಲ್ಲೆ ಪೂಜಾ ಕಾಲೋನಿಯಲ್ಲಿರುವ ವಾಸದ ಮನೆ ಹಾಗೂ ಕಲಬುರಗಿಯಲ್ಲಿನ ಸಿಟಿ ಸ್ಕ್ವೇರ್ ಸಂಕೀರ್ಣದಲ್ಲಿನ ಅಂಗಡಿ ಮಳಿಗೆ ಹಾಗೂ ಇವರು ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಕಛೇರಿ, ಯಾದಗಿರಿ ಜಿಲ್ಲೆ ಹಾಗೂ ಕಲಬುರಗಿ ಜಿಲ್ಲೆ.

ಕರ್ನಾಟಕ ರಾಜ್ಯ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ವಿವಿಧ ತಂಡಗಳಿಂದ ಮೇಲ್ಕಂಡ ಆರೋಪಿತ ಸರ್ಕಾರಿ ನೌಕರರ ವಿರುದ್ಧ ದಾಳಿ ಮುಂದುವರೆದಿದ್ದು, ಸದರಿ ಸರ್ಕಾರಿ ನೌಕರರು ಹೊಂದಿರುವ ಆಸ್ತಿ–ಪಾಸ್ತಿಗಳ ಮೂಲದ ಬಗ್ಗೆ ತನಿಖೆ ಮುಂದುವರೆದಿದೆ ಎಂದು ಪ್ರಕಟಣೆ ತಿಳಿಸಿದೆ.

## ಜಲಸೇನಾನಿಗಳ ನೇಮಕ

**ಬೆಂಗಳೂರು, ಜೂನ್ 16 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರ ವ್ಯಾಪ್ತಿಯ ಸಾರ್ವಜನಿಕರಿಗೆ ಮಂಡಳಿಯ ಕಾರ್ಯಚಟುವಟಿಕೆಗಳಾದ ನೀರು ಸರಬರಾಜು ಮತ್ತು ಒಳಚರಂಡಿ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆ, ಮಳೆ ನೀರು ಕೊಯ್ಲು ಅಳವಡಿಕೆ, ಸಂಸ್ಕರಿಸಿದ ತ್ಯಾಜ್ಯ ನೀರಿನ ಪುನರ್ ಬಳಕೆಯ ಬಗ್ಗೆ ಮನೆ ಮನೆಗಳಿಗೆ ತೆರಳಿ ಮಾಹಿತಿ ಒದಗಿಸಲು ಹಾಗೂ ನೀರು ಸರಬರಾಜು ಮತ್ತು ಒಳಚರಂಡಿಗೆ ಸಂಬಂಧಿಸಿದ ಕುಂದು ಕೊರತೆಗಳನ್ನು ಬಗೆಹರಿಸಲು, ಮಂಡಳಿಯಲ್ಲಿ ಸ್ವಯಂಸೇವಕರಾಗಿ ಜಲಸೇನಾನಿಯಾಗಿ ಕಾರ್ಯನಿರ್ವಹಿಸಲು ಪ್ರಥಮ ಹಂತದಲ್ಲಿ 14 ಮಂದಿಗೆ ಮಂಡಳಿಯ ಮಾನ್ಯ ಆಧ್ಯಕ್ಷರಾದ ತುಷಾರ್ ಗಿರಿನಾಥ್, ಇವರು ಪ್ರಮಾಣ ಪತ್ರವನ್ನು ನೀಡಿ ಕಾರ್ಯನಿರ್ವಹಿಸುವಂತೆ ತಿಳಿಸಿದ್ದಾರೆ.

ಅಂತೆಯೇ ಈ ಸ್ವಯಂಸೇವಕರು ನಿಸ್ವಾರ್ಥದಿಂದ ಯಾವುದೇ ಆರ್ಥಿಕ ಸೌಲಭ್ಯವನ್ನು ಅಪೇಕ್ಷಿಸದೆ ಬೆಂಗಳೂರಿನ ನಾಗರೀಕರು ಹಾಗೂ ಮಂಡಳಿಯೊಂದಿಗೆ ಸೇತುಬಂಧವಾಗಿ ಕಾರ್ಯರ್ನಿಹಿಸಲು ಮನಸ್ಸುಳ್ಳವಾಗಿರುತ್ತಾರೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ **www.bwssb.gov.in** ನಲ್ಲಿಯೂ ಸಹ ಪಡೆಯಬಹುದಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

# Volunteers work as “**Jalasenani**” in BWSSB

Bengaluru, June 16 (Karnataka Information)

BWSSB has employed 14 Volunteers to work as “**Jalasenani**” to create awareness about activities of BWSSB like water supply, Sewerage maintenance, Water conservation, Rain water harvesting and Re-use of treated water among the residence of Bangalore city. The Hon’ble chairman Sri Tushar girinath, I.A.S., have distributed certificates for 14 volunteers and requested them to work as “**Jalasenani**”. These volunteers functions selflessly as a bridge between public of the city and BWSSB without expecting any financial benefits. The details of volunteers has been provided and also can be obtained in BWSSB official website: www.bwssb.gov.in.

## ಅಂತರರಾಜ್ಯ ಸಾರಿಗೆ ಬಸ್ ಆರಂಭ

**ಬೆಂಗಳೂರು, ಜೂನ್ 16 (ಕರ್ನಾಟಕ ವಾರ್ತೆ)**

ಕರ್ನಾಟಕದಿಂದ ಆಂಧ್ರಪ್ರದೇಶ ರಾಜ್ಯಕ್ಕೆ ದಿನಾಂಕ 17.06.2020ರಿಂದ ಸಾರಿಗೆ ಕಾರ್ಯಾಚರಣೆಯನ್ನು ಹಂತ ಹಂತವಾಗಿ ಪ್ರಾರಂಭಿಸಲಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಗಳ ತಿಳಿಸಿದೆ.

ಮೊದಲ ಹಂತದಲ್ಲಿ ಬೆಂಗಳೂರಿನಿಂದ ಅನಂತಪುರ, ಹಿಂದುಪುರ, ಕದ್ರಿ, ಪುಟ್ಟಪರ್ತಿ, ಕಲ್ಯಾಣದುರ್ಗ, ರಾಯದುರ್ಗ, ಕಡಪ, ಪ್ರೂದತ್ತೂರು, ಮಂತ್ರಾಲಯ, ತಿರುಪತಿ, ಚಿತ್ತೂರು, ಮದನಪಲ್ಲಿ, ನೆಲ್ಲೂರು ಮತ್ತು ವಿಜಯವಾಡ. ಬಳ್ಳಾರಿಯಿಂದ ವಿಜಯವಾಡ, ಅನಂತಪುರ, ಕರ್ನೂಲ್ ಮತ್ತು ಮಂತ್ರಾಲಯ. ರಾಯಚೂರಿನಿಂದ ಮಂತ್ರಾಲಯ. ಶಾಹಪುರದಿಂದ ಮಂತ್ರಾಲಯ ಮತ್ತು ಕರ್ನೂಲ್ ಈ ಮಾರ್ಗಗಳಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗುತ್ತಿದೆ.

ಈ ಮಾರ್ಗಗಳಲ್ಲಿ ಸಂಚರಿಸಲು ಮುಂಗಡ ಆಸನಗಳನ್ನು www.ksrtc.in ವೆಬ್‌ಸೈಟ್ ಮತ್ತು ನಿಗಮದ/ಫ್ರಾಂಚೈಸಿ ಕೌಂಟರ್‌ಗಳ ಮುಖಾಂತರ ಕಾಯ್ದಿರಿಸಿಕೊಳ್ಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## KSRTC BUSES TO ANDRA PRADESH RESUMES FROM JUNE 17

Bengaluru, June 16 (Karnataka Information)

Karnataka State Road Transport Corporations will resume operations to Andhra Pradesh State in phased manner with effect from17.06.2020.

In the I phase, services will be operated on below mentioned routes From Bengaluru to Ananthpur, Hindupur, Kadri, Puttaparthi, Kalyanadurga, Rayadurga, Kadapa, Prodatur, Mantralaya, Thirupathi, Chittor, Madanapalli, Nellore and Vijayawada. From Bellary to Vijayawada, Ananthapur, Kurnool and Mantralay, from Raichur to Mantralaya and from Shahpur to Mantralaya and Kurnool

Passengers can book tickets in advance online at www.ksrtc.in or through KSRTC/Franchisee advance reservation counters for the above services says Official Press Release

## ದತ್ತು ಸ್ವೀಕಾರ

**ಬೆಂಗಳೂರು ಜೂನ್ 16 (ಕರ್ನಾಟಕ ವಾರ್ತೆ ) :**

ಮೈಸೂರು ಮೃಗಾಲಯದ "ಪ್ರಾಣಿಗಳ ದತ್ತು ಸ್ವೀಕಾರ ಯೋಜನೆ" ಅಡಿಯಲ್ಲಿ ಈ ಕೆಲಕಂಡವರು ಮೈಸೂರು ಮೃಗಾಲಯದ ಪ್ರಾಣಿ ಪಕ್ಷಿಗಳನ್ನು ನಿಗಧಿಪಡಿಸಿರುವ ಶುಲ್ಕವನ್ನು ಪಾವತಿಸಿ, ದತ್ತು ಸ್ವೀಕಾರ ಮಾಡಿರುತ್ತಾರೆ ಎಂದು ಮೃಗಾಲಯ ಪ್ರಕಟಣೆ ತಿಳಿಸಿದೆ.

ನೀಮ ಅನಂತರಾವ್ ಪಂಚಾಲ್ ಮಹಾರಾಷ್ಟ್ರ –ನಾಲ್ಲು ಕೊಂಬಿನ ಹುಲ್ಲೆ, ಎಂ.ಎಂ.ಕೆ ಮತ್ತು ಎಸ್.ಡಿ.ಎಂ ಮಹಿಳಾ ವಿದ್ಯಾಲಯ ಮೈಸೂರು– ಚಿರತೆ, ಬೆಕ್ಕು, ನವಿಲು, ಲವ್ ಬರ್ಡ್ ಮತ್ತು ಫಿಂಚ್, ಶ್ರೀನಿವಾಸ್ ಎಂ ಮೈಸೂರು– ನಾಗರ ಹಾವು, ಜಗದೀಶ್ ಆರ್ ಮೈಸೂರು –ದೋಲ್, ನರಹರಿ ಆರ್

ಬೆಂಗಳೂರು-ಕಾಳಿಂಗ ಸರ್ಪ, ಸಂಧ್ಯಾ ರಾಣಿ ಐಪಿಎಸ್ ನವದೆಹಲಿ- ಬಿಳಿ ನವಿಲು, ಮನೀಶ್ ಬೆಂಗಳೂರು-ಬುಲಿಕ್ ಬಕ್, ಜಿ. ಗುರುಪ್ರಸಾದ್ ಬೆಂಗಳೂರು- ನವಿಲು, ನೀರಾಜ ದೀಪಕ್ ಬೆಂಗಳೂರು-ಹಸಿರು ಅನಕೊಂಡ, ರೈಡರ್ಸ್ ಕಲ್ಚರ್ ಬೈಕಿಂಗ್ ಕ್ಲಬ್ ಬೆಂಗಳೂರು-ಬಿಳಿ ನವಿಲು.

## ಸಚಿವರ ಪ್ರವಾಸ

**ಬೆಂಗಳೂರು ಜೂನ್ 16 (ಕರ್ನಾಟಕ ವಾರ್ತೆ ) :**

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವ ಕೆ. ಗೋಪಾಲಯ್ಯ ಅವರು ಜೂನ್ 17 ಮತ್ತು 18 ರಂದು ಹಾಸನ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಜೂನ್ 18 ರಂದೆ ಕೇಂದ್ರ ಸ್ಥಾನಕ್ಕೆ ಹಿಂದಿರುಗುವರು **ಎಂದು ಪ್ರಕಟಣೆ ತಿಳಿಸಿದೆ.**

**ಚಿತ್ರ ಶೀರ್ಷಿಕೆ**

**ಬೆಂಗಳೂರು ಜೂನ್ 16 (ಕರ್ನಾಟಕ ವಾರ್ತೆ ) :**

ಮುಖ್ಯಮಂತ್ರಿ ಬಿ ಎಸ್ ಯಡಿಯೂರಪ್ಪ ಅವರು ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದರು.

ಸಭೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಬಿ. ಶ್ರೀರಾಮುಲು, ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗಂಗಾರಾಂ ಬಡೇರಿಯ ಮತ್ತು ಸರ್ಕಾರದ ಇತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಬೆಂಗಳೂರು ಜೂನ್ 16 (ಕರ್ನಾಟಕ ವಾರ್ತೆ ) :**ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರು ಇಂದು ಚಾಮರಾಜಪೇಟೆಯ ಶಂಕರ ಮಠದಲ್ಲಿ ಕೋವಿಡ್ ನಿಯಂತ್ರಣಕ್ಕಾಗಿ ಆಯೋಜಿಸಿದ್ದ ಧನ್ವಂತರಿ ಯಾಗದಲ್ಲಿ ಪಾಲ್ಗೊಂಡರು.

**ಅವಧಿ ವಿಸ್ತರಣೆ**

**ಬೆಂಗಳೂರು ಜೂನ್ 16 (ಕರ್ನಾಟಕ ವಾರ್ತೆ ) :**

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವ್ಯಾಪ್ತಿಗೆ ಒಳಪಡುವ ಸಾರ್ವಜನಿಕರು/ಸಂಸ್ಥೆಗಳಲ್ಲಿ ನೀರಿನ ಸಂರಕ್ಷಣೆ, ಮಳೆ ನೀರು ಕೊಯ್ಲು ಅಳವಡಿಕೆ ಮತ್ತು ತ್ಯಾಜ್ಯ ನೀರು ನಿರ್ವಹಣೆ ಅಳವಡಿಸಿಕೊಂಡು ನೀರಿನ ಸದ್ಬಳಕೆ ಮಾಡುತ್ತಿರುವವರಿಗೆ ಮಂಡಳಿಯು ನೀಡುತ್ತಿರುವ ಜಲ ಋಷಿ ಪುರಸ್ಕಾರಕ್ಕೆ ಅರ್ಜಿ ಸಲ್ಲಿಸಲು 31.03.2020 ರಂದು ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿತ್ತು. ಪ್ರಸ್ತುತ ಅಂತಿಮ ದಿನಾಂಕವನ್ನು ವಿಸ್ತರಿಸಿ ದಿನಾಂಕ:17.06.2020 ರಿಂದ 27.06.2020 ರವರೆಗೆ ಈ ಕೆಳಕಂಡ ವರ್ಗಗಳಲ್ಲಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ.

1) ಗೃಹ ಬಳಕೆ ಕಟ್ಟಡಗಳು-ಪ್ರತ್ಯೇಕ ಮನೆಗಳು 2) 20 ಮತ್ತು ಅದಕ್ಕಿಂತ ಕಡಿಮೆ ಪ್ಲಾಟ್‌ಗಳುಳ್ಳ ಅಪಾರ್ಟ್‌ಮೆಂಟ್‌ಗಳು, 3) 20ಕ್ಕಿಂತ ಹೆಚ್ಚು ಪ್ಲಾಟ್‌ಗಳುಳ್ಳ ಅಪಾರ್ಟ್‌ಮೆಂಟ್‌ಗಳು 4) ಗೃಹೇತರ ಕಟ್ಟಡಗಳು-ಹೋಟೆಲ್ ಮತ್ತು ವಾಣಿಜ್ಯ ಕಟ್ಟಡಗಳು 5) ಸರ್ಕಾರಿ ಕಟ್ಟಡಗಳು, 6) ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು, 7)ಶೈಕ್ಷಣಿಕ ಸಂಸ್ಥೆಗಳು ಮತ್ತು ಆಸ್ಪತ್ರೆಗಳು.

ಸಾರ್ವಜನಿಕರು/ಸಂಸ್ಥೆಗಳು ಮಂಡಳಿಯ ವೆಬ್‌ಸೈಟ್: www. bwssb.gov.in ನಲ್ಲಿ ಲಭ್ಯವಿರುವ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಜಲ ಋಷಿ ಪುರಸ್ಕಾರಕ್ಕೆ ಭಾಗವಹಿಸಬಹುದೆಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## Last Date extended

Bengaluru, June 16 (Karnataka Information)

Bangalore Water Supply and Sewerage Board had scheduled 31.03.2020 as last date to submit applications for an award titled “Jala Rushi Puraskar” to public/institutions who have implemented water conservation techniques, Rain water harvesting and Waste Water Management. Now the last date has been extended and public/institutions can apply for the award from 17.06.2020 to 27.06.2020 by filling in details in prescribed application format available in BWSSB website :**www.bwssb.gov**.in under below mentioned categories.

1) Domestic – Residential individual houses, 2) Apartments up to 20 flats, 3) Apartments having 20 and more flats, 4) Non Domestic- Hotels and commercial Complex, 5) Government Buildings 6)

Micro, Small and Medium enterprises 7) Educational Institutions and Hospitals says official Press Release.